ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ವಕೀಲರಿಂದಃ-

3 ಮತ್ತು 4ನೇ ಅರ್ಜಿದಾರರು ನನ್ನ ಮಗಳು ತಾಯಿ ಎಂದರೆ ಸರಿ. ಅವರುಗಳನ್ನು ಈ ಕೇಸಿಗೆ ಯಾವ ಉದ್ದೇಶದಿಂದ ಪಕ್ಷಗಾರರನ್ನಾಗಿ ಮಾಡಿರುತ್ತೀರಾ ಎಂದರೆ ಮೃತ ವ್ಯಕ್ತಿ ಸಾಕ್ಷಿ 3 ಮತ್ತು 4ನೇ ಅರ್ಜಿದಾರರು ಅವರು ಅಕ್ಕ ಮತ್ತು ತಾಯಿಯಾದ ಕಾರಣ ಪಾರ್ಟಿ ಮಾಡಿರುತ್ತೇನೆ. ಅಪಘಾತವನ್ನು ನಾನು ಕಣ್ಣಾರೆ ನೋಡಿರುತ್ತೇನೆ. ಅಪಘಾತಕ್ಕೆ ಸಂಬಂಧಪಟ್ಟಂತೆ ನಾನು ದೂರು ಕೊಟ್ಟಿಲ್ಲ. ಮತ್ತೊಬ್ಬರು ಕೊಟ್ಟಿರುತ್ತಾರೆ. ಪೊಲೀಸರು ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

ಸದರಿ ಅಪಘಾತ ಟಾರ್ ರಸ್ತೆಯಲ್ಲಿ ಅಗಿದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಬಿಳಿ ಪಟ್ಟಿ ಅಥವಾ ಜಿಬ್ರಾ ಕ್ರಾಸ್ ಇರಲಿಲ್ಲ. ಅಪಘಾತವಾದ ದಿನ 4-5 ದಿನ ಹುಡುಗರು ರಸ್ತೆ ದಾಟುತ್ತಿದ್ದಾಗ ಆಗಿದೆ ಎಂದರೆ ಸರಿ. ಸದರಿ ಅಪಘಾತದಲ್ಲಿ ಟೆಂಪೋ ಚಾಲಕನ ತಪ್ಪು ಇಲ್ಲ ಎಂದರೆ ಸರಿಯಲ್ಲ. ಟೆಂಪೋ ಚಾಲಕನನ್ನು ನೋಡಿರುತ್ತೇನೆ. ಆತನ ಹೆಸರನ್ನು ನಾನು ಮರೆತಿರುತ್ತೇನೆ.

ಅಪಘಾತದ ಸಮಯದಲ್ಲಿ ನನ್ನ ಮಗ 3ನೇ ತರಗತಿ ಕಲಿಯುತ್ತಿದ್ದ. ಆತನ ಶಾಲಾ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ. ರೇಷನ್ ಕಾರ್ಡ್ ಹಾಜರುಪಡಿಸಲು ನನಗೆ ತೊಂಂದರೆ ಇಲ್ಲ. ನನ್ನ ಮಗ 3ನೇ ತರಗತಿ ಓದುತ್ತಿರಲಿಲ್ಲ ಮತ್ತು ಬಹಳ ಚಿಕ್ಕವನಾಗಿದ್ದ ಎಂದರೆ ಸರಿಯಲ್ಲ. ಆತನ

ಅಂತ್ಯ ಸಂಸ್ಕಾರಕ್ಕೆ ಅರ್ಜಿಯಲ್ಲಿ ಹೇವಿರುವಷ್ಟು ಖರ್ಚು ಮಾಡಿಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಹಣ ಪಡೆಯುವ ಸಲುವಾಗಿ ನಾನು ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯಾ ಮಂಡಳಿಯ
ಪೀಠಾಧಿಕಾರಿಗಳು